ಮಾಜಿ ಸಂಸದ ಆರ್.ಎಲ್.ಜಾಲಪ್ಪ ಹುಟ್ಟುಹಬ್ಬ ಪ್ರಯುಕ್ತ ಆಸ್ಪತ್ರೆಯಲ್ಲಿ 45 ಕೋಟಿ ರೂ. ವೆಚ್ಚದ ತೀವ್ರ ನಿಗಾ ಘಟಕ ಆರಂಭ: ಜಿ.ಎಚ್.ನಾಗರಾಜ್

# 19ಕ್ಕೆ ಜಾಲಪ್ಪ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸಾ ಕೊಠಡಿ ಲೋಕಾರ್ಪಣೆ

**ಕೋಲಾರ:** ಮಾಜಿ ಸಂಸದ ಆರ್.ಎಲ್.ಜಾಲಪ್ಪ ಅವರ ಹುಟ್ಟುಹಬ್ಬವಾದ ಅ.19 ರಂದು 45 ಕೋಟಿ ರೂ. ವೆಚ್ಚದ ತೀವ್ರ ನಿಗಾ ಘಟಕ, ಶಸ್ತ್ರಚಿಕಿತ್ಸಾ ಕೊಠಡಿಗಳನ್ನು ಲೋಕಾರ್ಪಣೆ ಮಾಡುತ್ತಿರುವುದಾಗಿ ದೇವರಾಜ ಅರಸು ವೈದ್ಯಕೀಯ ವಿವಿ ಆಡಳಿತ ಮಂಡಳಿ ಕಾರ್ಯದರ್ಶಿ ಜಿ.ಎಚ್. ನಾಗರಾಜ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಸಂಸದ ಜಾಲಪ್ಪರ ಹುಟ್ಟುಹಬ್ಬವನ್ನು ಅ.19ರಂದು ಜಾಲಪ್ಪ ಆಸ್ಪತ್ರೆ ದಿನವಾಗಿ ಆಚರಿಸುತ್ತಿದ್ದು, ಕಾರ್ಯಕ್ರಮದಲ್ಲಿ ಜಾಲಪ್ಪ ಅವರೊಂದಿಗೆ ರಾಜ್ಯ ವೈದ್ಯಕೀಯ ಶಿಕ್ಷಣ ಸಚಿವ ಡಿ.ಕೆ.ಶಿವಕುಮಾರ್, ವಿವಿ ಕುಲಪತಿ ಡಾ.ಎಸ್. ಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ಸಂಸದ ಕೆ.ಎಚ್.ಮುನಿಯಪ್ಪ, ಶಾಸಕ ಕೆ.ಶ್ರೀನಿವಾಸಗೌಡ ಭಾಗವಹಿಸುವರು ಎಂದು ತಿಳಿಸಿದರು.

**12 ಶಸ್ತ್ರಚಿಕಿತ್ಸಾ ಕೊಠಡಿ:** ಅಂದು ಬೆಳಗ್ಗೆ 10 ಗಂಟೆಗೆ ಜಾಲಪ್ಪ ಹುಟ್ಟುಹಬ್ಬದ ಅಂಗವಾಗಿ ಆಸ್ಪತ್ರೆ ದಿನಾಚರಣೆ ನಡೆಯಲಿದ್ದು, ಮಧ್ಯಾಹ್ನ 2.30 ಗಂಟೆಗೆ 45 ಕೋಟಿ ರೂ. ವೆಚ್ಚದ ಕಟ್ಟಡ, ಉಪಕರಣಗಳ ಲೋಕಾರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ಆಸ್ಪತ್ರೆ ಆವರಣದಲ್ಲಿ 72,646 ಚದರ ಅಡಿ ವಿಸ್ತೀರ್ಣದಲ್ಲಿ 30 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ನೂತನ ಕಟ್ಟಡದಲ್ಲಿ 15 ಕೋಟಿ ರೂ.ಮೌಲ್ಯದ ಅಲ್ಟ್ರಾ-ಆಧುನಿಕ ಮಾಡ್ಯುಲರ್, ಸುಸಜ್ಜಿತ ಶಸ್ತ್ರಚಿಕಿತ್ಸಾ ಸಲಕರಣೆಗಳು, 36 ಹಾಸಿಗೆಗಳುಳ್ಳ ತೀವ್ರ ನಿಗಾ ಘಟಕ, 18 ಹಾಸಿಗೆಗಳುಳ್ಳ ಡಯಾಲಿಸಿಸ್ ಘಟಕ, ಮೂತ್ರಪಿಂಡ ಶಾಸ್ತ್ರ ವಿಭಾಗ, ಸುಸಜ್ಜಿತ ಎಂಡೋಸ್ಕೋಪಿ ಯುನಿಟ್, ಗ್ಯಾಸ್ಟ್ರೋಎಂಟರಾಲಜಿ ವಿಭಾಗಗಳು ಲೋಕಾರ್ಪಣೆಗೊಳ್ಳಲಿವೆ.



ಕೋಲಾರದ ದೇವರಾಜ ಅರಸು ವೈದ್ಯಕೀಯ ವಿವಿ ಆಡಳಿತ ಮಂಡಳಿ ಕಾರ್ಯದರ್ಶಿ ಜಿ. ಎಚ್.ನಾಗರಾಜ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ವೈದ್ಯಕೀಯ ಕಾಲೇಜಿನ ಉಪಾಧ್ಯಕ್ಷ ರಾಜೇಶ್ ಎನ್.ಜಗದಾಳೆ, ಹಣಕಾಸಿನ ನಿರ್ದೇಶಕರಾದ ಜಿ.ರಾಜೇಂದ್ರ, ಕುಲಸಚಿವ ಎವಿಎಂ.ಕುಟ್ಟಿ ಪ್ರಾಂಶುಪಾಲ ಹರೇಂದ್ರಕುಮಾರ್, ವೈದ್ಯಕೀಯ ಅಧೀಕ್ಷಕ ಲಕ್ಷ್ಮಯ್ಯ, ಖ್ಯಾತ ವೈದ್ಯರಾದ ಡಾ.ಜ್ಯೂಲಿಯಸ್ ಪುನೆನ್, ಡಾ.ಸುನಿಲ್ ಕಾರಂತ್, ಡಾ.ಉಮೇಶ್ ಜಲಿಹಾಲ್, ಡಾ.ಎಸ್.ಸುಂದರ್ ಮತ್ತಿತರರು ಭಾಗವಹಿಸುವರು ಎಂದರು.

**ಜಾಲಪ್ಪರ ಕನಸಿನ ಕೂಸು:** ಬಡ ರೋಗಿಗಳಿಗೆ ಉಚಿತ ಆರೋಗ್ಯ ಸೇವೆ ಕಲ್ಪಿಸುವ ಜಾಲಪ್ಪ ಅವರ ಕನಸಿನ ಕೂಸು ಈ ಆಸ್ಪತ್ರೆಯಾಗಿದ್ದು, ಈ ಭಾಗದ ಜನತೆಗೆ ಉತ್ತಮ ಆರೋಗ್ಯ ಸೇವೆ ಒದಗಿಸುವ ಉದ್ದೇಶಹೊಂದಿದೆ ಎಂದರು.

ಕುಲಾಪತಿ ಡಾ.ಎಸ್.ಕುಮಾರ್ ಮಾತನಾಡಿ, ಕೇಂದ್ರ ಸರ್ಕಾರದ ಸಹಾಯಕ್ಕೆ ಕೋರಲಾಗಿದ್ದು, ನಾವು ಸ್ಥಳ ಸೌಲಭ್ಯ ನೀಡುತ್ತೇವೆ. ಆಧುನಿಕ ಉಪಕರಣಗಳಿಗೆ ಅಗತ್ಯ ಆರ್ಥಿಕ ನೆರವು ನೀಡಿದರೆ ಬಡ ರೋಗಿಗಳಿಗೆ ಮತ್ತಷ್ಟು ಉತ್ತಮ ಸೇವೆ ಸಲ್ಲಿಸಲು ಸಾಧ್ಯವಾಗುತ್ತದೆ ಎಂದರು. ನಾವು ವಿದ್ಯುತ್, ಕಟ್ಟಡ ಮತ್ತಿತರ ಎಲ್ಲ ಸೌಲಭ್ಯ ಒದಗಿಸಲಿದ್ದು, ಸಹಾಯ ಸಿಕ್ಕರೆ ಮತ್ತಷ್ಟು ಆಧುನಿಕ ಯಂತ್ರಗಳು ಗ್ರಾಮೀಣ ರೋಗಿಗಳಿಗೆ ಸಿಗಲಿದೆ ಎಂದು ತಿಳಿಸಿದರು.

ಜಾಲಪ್ಪ ಪುತ್ರ ರಾಜೇಂದ್ರ ಮಾತನಾಡಿ, ಆಧುನಿಕವಾಗಿ ನಿರ್ಮಿಸಿರುವ ಶಸ್ತ್ರಚಿಕಿತ್ಸಾ ಕೇಂದ್ರದಲ್ಲಿ ಹಿಂದಿನಂತೆ ಶುಲ್ಕವಿದ್ದು, ಯಾವುದೇ ಹೆಚ್ಚುವರಿ ಮಾಡಿಲ್ಲ ಎಂದರು. ಕುಲಸಚಿವ ಎ.ವಿ.ಎಂ.ಕುಟ್ಟಿ ವೈದ್ಯಕೀಯ ಅಧೀಕ್ಷಕ ಡಾ.ಲಕ್ಷ್ಮಯ್ಯ, ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ಮುಖ್ಯ ಇಂಜಿನಿಯರ್ ಹನುಮಂತರಾಯ ಮತ್ತಿತರರಿದ್ದರು.